# ನಲಿ ಕಲಿ ಕ್ರಿಯಾಶೀಲ ಕಾರ್ಯಕರು

## ಶಿವಮೊಗ್ಗ ಜಿಲ್ಲೆ



# ಸೇತುಬಂಧ ಶಿಕ್ಷಣ

**2021-22**

**5ನೇತರಗತಿ ಮಕ್ಕಳ ಕಲಿಕೆಗಾಗಿ**

**(ಹಿಂದಿನ ತರಗತಿಯ ಕಲಿಕಾಫಲಗಳನ್ನು ಆಧರಿಸಿದಂತೆ)**

## ಪರಿಸರ ಅಧ್ಯಯನ

# ಅಭ್ಯಾಸದ ಹಾಳೆಗಳು

Edit with WPS Office

## ಮಾರ್ಗದರ್ಶನ

ಶ್ರೀಯುತ ಫಣೀಶ್

ಹಿರಿಯ ಉಪನ್ಯಾಸಕರು ಡಯಟ್ ಶಿವಮೊಗ್ಗ

ಸಹಕಾರ : ಶ್ರೀಮತಿ ಲೀಲಾವತಿ, ಉಪನ್ಯಾಸಕರು, ಡಯಟ್ ಶಿವಮೊಗ್ಗ

# ಸಂಪನ್ಮೂಲ ವ್ಯಕ್ತಿಗಳ ವಿವರ

| | |
|---|---|
| ಶ್ರೀಯುತ ರೇಣುಕಾರಾಧ್ಯ ಪಿ .ಪಿ.<br>ಸ.ಕಿ.ಪ್ರಾ.ಶಾಲೆ ಸಂಕ್ಲಾಪುರ<br>ತೀರ್ಥಹಳ್ಳಿ ತಾ .ಶಿವಮೊಗ್ಗ ಜಿ | ಶ್ರೀಮತಿ ಪೌಜಿಯ ಸರವತ್<br>ಸ.ಕಿ.ಪ್ರಾ.ಶಾಲೆ ಕಲ್ಲುಗುಡ್ಡ<br>ತೀರ್ಥಹಳ್ಳಿ ತಾ.ಶಿವಮೊಗ್ಗ ಜಿ |
| ಶ್ರೀಮತಿ ಸುರಕ್ಷಿತ ಕೆ.ಜಿ<br>ಸ.ಹಿ.ಪ್ರಾ.ಶಾಲೆ ಹುತ್ತಳ್ಳಿ ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, | ಶ್ರೀಯುತ ಜಾವಿದ್ ಭಾಷಾ<br>ಸ.ಹಿ.ಪ್ರಾ.ಶಾಲೆ ಕಂದಿಕೆರೆ ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ |
| ಶ್ರೀಮತಿ ತ್ರಿವೇಣಿ. ಎಂ<br>ಸ.ಹಿ.ಪ್ರಾ. ಶಾಲೆ ಒಡ್ಡಿನಕೊಪ್ಪ ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. | ಶ್ರೀಮತಿ ಕವಿತ.ಕೆ.ಬಿ.<br>ಸ.ಕಿ.ಪ್ರಾ.ಶಾಲೆ ಇಡುಕಿನ ಹೊಸಕೊಪ್ಪ ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. |
| ಶ್ರೀಮತಿ ರುಕ್ಕಿಣಿ.ಎನ್<br>ಸ.ಕಿ.ಪ್ರಾ. ಶಾಲೆ ಭೀಮನಗರ ಇಜೇರಿ ಜೇವರ್ಗಿ ತಾಲ್ಲೂಕು, ಕಲಬುರ್ಗಿ ಜಿಲ್ಲೆ. | ಶ್ರೀಮತಿ ಶೋಭಾ ವೈ<br>ಸ.ಹಿ.ಪ್ರಾ.ಶಾಲೆ ಜ್ಯೋತಿ ನಗರ<br>ಶಿವಮೊಗ್ಗ |

ತಾಂತ್ರಿಕ ಸಹಕಾರ

ಶ್ರೀಯುತ ಶಿವಶಂಕರಯ್ಯ.ಹೆಚ್.ಎಲ್

ಸ.ಕಿ.ಪ್ರಾ. ಶಾಲೆ ಬಿ.ಸಿ ಪಾಳ್ಯ ಮಧುಗಿರಿ ತುಮಕೂರು

Edit with WPS Office

ಕಲಿವಿನ ಫಲ :ಜೀವಿಗಳು ಜೀವಿಸಲು ಬೇಕಾಗುವ ಗಾಳಿ,ಮಣ್ಣು ಮತ್ತು ನೀರಿನ ಪ್ರಾಮುಖ್ಯತೆಯನ್ನು ವಿವರಿಸುವರು.

ಕಲಿಕಾಂಶ : ಅ). ಭೂಮಿಯ ಮೇಲೆ ಜೀವಿಸಲು ಅಗತ್ಯವಾದ ಪರಿಸರ ಇದೆ ಎಂಬ ಮೆಚ್ಚುಗೆ ವ್ಯಕ್ತಪಡಿಸುವರು.

ದಿನ -1

1.ನೀನು ಮನೆಯಿಂದ ಶಾಲೆಗೆ ಬರುವಾಗ ನೋಡುವ ವಿವಿಧ ವಸ್ತುಗಳು, ಪ್ರಾಣಿಗಳು, ಪಕ್ಷಿಗಳು ಮುಂತಾದವುಗಳನ್ನು ಪಟ್ಟಿ ಮಾಡು

2.ಮೇಲೆ ನೀನು ಪಟ್ಟಿ ಮಾಡಿದ ಹೆಸರುಗಳಲ್ಲಿ ಜೀವ ಇರುವ ಸಜೀವಿಗಳು ಮತ್ತು ಜೀವ ಇಲ್ಲದ ನಿರ್ಜೀವಿಗಳನ್ನು ವಿಂಗಡಣೆ ಮಾಡು.

| ಸಜೀವಿಗಳು(ಜೀವ ಇರುವ) | ನಿರ್ಜೀವಿಗಳು(ಜೀವ ಇಲ್ಲದ) |
|---|---|
| | |
| | |
| | |
| | |
| | |

3. ಈ ಕೆಳಗಿನ ವಸ್ತುಗಳ ಉಪಯೋಗ ಬರೆ.

1.ಪೆನ್ನು -

2.ನೆಲ್ಲಿ -

3.ಮರ -

4.ಬೈಕ್ -

5.ಹಸು -

Edit with WPS Office

ಕಲಿಕಾಂಶ : ಗಾಳಿ,ನೀರು ಮತ್ತು ಮಣಿನ ಪ್ರಾಮುಖ್ಯತೆಯನ್ನು ಗುರುತಿಸುವರು.

ದಿನ - 2

**1.ನಿನಗೆ ಜೀವಿಸಲು ಬೇಕಾಗುವ ಅಗತ್ಯ ವಸ್ತುಗಳನ್ನು ಪಟ್ಟಿ ಮಾಡು.**

**ಉದಾಹರಣೆ: ಗಾಳಿ ,ಆಹಾರ, ಬಟ್ಟೆ ____________ ___________________________**

**2.ಈ ಕೆಳಗಿನ ಚಿತ್ರಗಳನ್ನು ನೋಡಿ ಗಾಳಿಯ ಉಪಯೋಗಗಳನ್ನು ಊಹಿಸಿ ಬರೆ.**

1.  2.  3.  4. 

1.____________________________________________________

2.____________________________________________________

3.____________________________________________________

4.____________________________________________________

**3. ನೀರಿನ ಉಪಯೋಗಗಳನ್ನು ಬರೆ.**

1.____________________________________________________

2.____________________________________________________

**4.ಮಣ್ಣಿನ ಉಪಯೋಗಗಳನ್ನು ತಂದೆಯ ಬಳಿ ತಿಳಿದುಕೊಂಡು ಕೆಳಗೆ ಬರೆ.**

1.____________________________________________________

2.____________________________________________________

**5.ಈ ಚಿತ್ರಗಳನ್ನು ನೋಡಿ ನಾವು ಹೇಗೆಲ್ಲಾ ಗಾಳಿಯನ್ನು ಮಲಿನ ಮಾಡುತ್ತಿದ್ದೇವೆ ನೋಡಿ ಬರೆ.**



Edit with WPS Office

6.ಈ ಚಿತ್ರಗಳನ್ನು ನೋಡಿ ನಾವು ನೀರನ್ನು ಹೇಗೆಲ್ಲಾ ಮಲಿನ ಮಾಡುತ್ತಿದ್ದೇವೆ ನೋಡಿ ಬರೆ.



7.ಮಣ್ಣನ್ನು ಹೇಗೆ ಮಲಿನ ಮಾಡುತ್ತೇವೆ ಚಿತ್ರ ನೋಡಿ ಬರೆ ಮತ್ತು ನಿಮ್ಮ ತಂದೆಯೊಡನೆ ಬೆಳೆಗಳಿಗೆ ಯಾವ ಯಾವ ಔಷಧಿಯನ್ನು ಹೊಲಗಳಿಗೆ ಬಳಸುವರು ಇದರಿಂದ ಭೂಮಿ ಏನಾಗುವುದು ಎಂದು ತಿಳಿದುಕೊ.



ದಿನ - 3

**ಕಲಿಕಾಂಶ** : ಕಾಲಗಳಲ್ಲಿನ ಬದಲಾವಣೆಗಳನ್ನು ವಿವರಿಸುವರು.

1.ನೀನು ನಲಿಕಲಿ ತರಗತಿಯಲ್ಲಿ ಇದ್ದಾಗ ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಹವಾಮಾನ ನಕ್ಷೆಯಲ್ಲಿ ಗುರುತು ಮಾಡುತ್ತಿದ್ದ ಅಂಶಗಳು ಯಾವುವು?

ಉದಾ.ಬಿಸಿಲು, ಕಾಮನಬಿಲ್ಲು,

★ಕಾಲಗಳಲ್ಲಿ 3 ವಿಧಗಳು

1.ಬೇಸಿಗೆ ಕಾಲ ( ಫೆಬ್ರವರಿ- ಮಾರ್ಚ್-ಏಪ್ರಿಲ್-ಮೇ)

2.ಮಳೆಗಾಲ (ಜೂನ್ -ಜುಲೈ - ಆಗಸ್ಟ್ -ಸೆಪ್ಟೆಂಬರ್)

3.ಚಳಿಗಾಲ (ಆಕ್ಟೊಬರ್- ನವಂಬರ್-ಡಿಸೆಂಬರ್-ಜನವರಿ)

2.ಯಾವ ಯಾವಕಾಲದಲ್ಲಿ ಪರಿಸರವು ಹೇಗಿರುತ್ತದೆ ಎಂದು ಪಟ್ಟಿ ಮಾಡು.

◆ಮಳೆಗಾಲ-ಮೋಡಕವಿದ ವಾತಾವರಣ, ಸಸ್ಯಗಳು ಚೆನ್ನಾಗಿ ಬೆಳೆದಿರುತ್ತವೆ, ಬೆಳೆಗಳನ್ನು ಬೆಳೆಯುತ್ತೇವೆ. ವಾತಾವರಣ ತಂಪಾಗಿರುತ್ತದೆ. ಇತ್ಯಾದಿ)

◆ಬೇಸಿಗೆಕಾಲ

★ ಚಳಿಗಾಲ :

Edit with WPS Office

**3.ಈ ಕೆಳಗಿನ ಚಿತ್ರಗಳನ್ನು ನೋಡು ಸೂಚನೆಯಂತೆ ಗುರುತು ಮಾಡು**

**ಬೇಸಿಗೆ ಕಾಲದಲ್ಲಿ ಧರಿಸುವ ಉಡುಪುಗಳಿಗೆ ವೃತ್ತ**

**ಚಳಿಗಾಲದಲ್ಲಿ ಧರಿಸುವ ಉಡುಪುಗಳಿಗೆ ತ್ರಿಭುಜ**

**ಮಳೆಗಾಲದಲ್ಲಿ ಧರಿಸುವ ಉಡುಪುಗಳಿಗೆ ಚೌಕ**




**4.ಬೇರೆ ಬೇರೆ ಕಾಲಗಳಲ್ಲಿ ತಿನ್ನುವ ಆಹಾರ ವಸ್ತುಗಳನ್ನು ಪಟ್ಟಿ ಮಾಡು.**

**ಬೇಸಿಗೆಕಾಲ :**________________________________________

**ಚಳಿಗಾಲ :**________________________________________

**ಮಳೆಗಾಲ :**________________________________________

**ಮಾರ್ಗದರ್ಶಕರ ಸಹಿ:**

**ರೇಣುಕಾರಾಧ್ಯ ಸ.ಕಿ.ಪ್ರಾ.ಶಾಲೆ ಸಂಕ್ಲಾಪುರ ತೀರ್ಥಹಳ್ಳಿ**

# ಅಭ್ಯಾಸ ಹಾಳೆ ಪರಿಸರ ಅಧ್ಯಯನ

ವಿದ್ಯಾರ್ಥಿಯ ಹೆಸರು;- ತರಗತಿ ;-5 ದಿನಾಂಕ;-

****************************************************************************************************************************** ದಿನ-4

**ಕಲಿಕಾಫಲ;-** ವಿವಿಧ ಆಹಾರಗಳ ಮೂಲಗಳನ್ನು ಪಟ್ಟಿ ಮಾಡುವರು.

**ಚಟುವಟಿಕೆ;- ಸಂಭಾಷಣೆ ;-** ( ರಾಮು , ರಾಜು, ಲತಾ, ಈ ಮೂವರು ಗೆಳೆಯರು ಉದ್ಯಾನವನದಲ್ಲಿ ವಿಹಾರಕ್ಕಾಗಿ ಹೋಗಿರುವರು.ಅಲ್ಲಿ ಸಂಭಾಷಣೆ ನಡೆಸುತ್ತಿದ್ದಾರೆ.)

ರಾಮು;- ಏ, ರಾಜು ಬೇಗ ಬೇಗ ನಡೆಯಿರಿ, ಊಟ ಮಾಡಿಲ್ವಾ।

ಲತಾ;- ಮಾಡಿದ್ದೇನೆ ಆದರೆ ಬರೀ ತರಕಾರಿ, ಹಣ್ಣುಗಳ ಸಲಾಡ್ ತಿಂದೆ.\

ರಾಜು;- ನಮ್ಮ ಮನೆಯಲ್ಲಿ ಈ ದಿನ ಮಾಂಸದ ಅಡುಗೆ ಮಾಡಿದ್ದರು.

ರಾಮು;- ಓಹೋ। ಕೋಳಿನೋ, ಕುರಿನೋ?

ರಾಜು;- ಕೋಳಿ ಸಾರು ಜೊತೆಗೆ ಅದರಲ್ಲಿ ಮೊಟ್ಟೆಗಳು ಇದ್ದವು!

ಲತಾ;- ರಾಮು, ನೀನು ಏನು ತಿಂದೆ? ಹೇಳಲೆ ಇಲ್ಲಾ?

ರಾಮು;- ನಾನು ಮೀನು ತಿಂದೆ, ತುಂಬಾ ಚೆನ್ನಾಗಿತ್ತು.

1. **ಮೇಲಿನ ಸಂಭಾಷಣೆಯನ್ನು ಓದುತ್ತಾ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ**

1) ಮೂವರು ಗೆಳೆಯರು ಎಲ್ಲಿಗೆ ವಿಹಾರಕ್ಕಾಗಿ ಹೊಟಿದ್ದರು?


2) ಲತಾ ಏನು ಊಟ ಮಾಡಿದ್ದಾಳೆ?


3) ಲತಾ ಊಟ ಮಾಡಿದ ಬಳಕ ಆಹಾರದ ವಸ್ತುಗಳು ಎಲ್ಲಿಂದ ಸಿಗುತ್ತವೆ?

4) ರಾಜು ತಿಂದ ಆಹಾರದ ಪದಾರ್ಥಗಳು ಯಾವುವು?

2. **ಕೆಳಗಿನ ಆಹಾರ ವಸ್ತುಗಳಲ್ಲಿ ಪ್ರಾಣಿಮೂಲ ಆಹಾರಗಳಿಗೆ ವೃತ್ತ ಹಾಕು.**








# ಅಭ್ಯಾಸ ಹಾಳೆ ಪರಿಸರ ಅಧ್ಯಯನ

ವಿದ್ಯಾರ್ಥಿಯ ಹೆಸರು;– ತರಗತಿ ;–5 ದಿನಾಂಕ;–

****************************************************************************************************************************** ದಿನ–5

**ಕಲಿಕಾಫಲ;–** ವಿವಿಧ ಆಹಾರಗಳನ್ನು ತಯಾರಿಸುವ ಪರಿಕರಗಳನ್ನು ಹಾಗೂ ಆಹಾರಗಳನ್ನು ಪಟ್ಟಿ ಮಾಡುವರು.

**ಕಲಿಕಾಂಶ;–** ಆಹಾರ ತಯಾರಿಸುವ ಪರಿಕರಗಳನ್ನು ಪರಿಕರಗಳನ್ನು ಕೋಷ್ಟಕದ ರೂಪದಲ್ಲಿ ವರ್ಗೀಕರಿಸುವರು.

1. ಈ ಕೆಳಗಿನ ಕೋಷ್ಟಕದಲ್ಲಿ ಕೊಟ್ಟಿರುವ ಪರಿಕರಗಳನ್ನು ಹೆಸರಿಸು. ಹಾಗೂ ಅವುಗಳ ಉಪಯೋಗ ಬರೆ.

| ಚಿತ್ರ | ಹೆಸರು | ಉಪಯೋಗ |
|---|---|---|
|  | | |
|  | | |
|  | | |
|  | | |
|  | | |

2. ಈ ಕೆಳಗೆ ಕೊಟ್ಟಿರುವ ಆಹಾರ ಪದಾರ್ಥಗಳನ್ನು ಸಸ್ಯ ಹಾಗೂ ಪ್ರಾಣಿಮೂಲ ಆಹಾರಗಳಾಗಿ ವಿಂಗಡಿಸು.

ಸೌತೆಕಾಯಿ, ಮೊಟ್ಟೆ, ಮೀನು, ಮಾಂಸ, ಮಾವು, ಹಲಸು, ಏಡಿ, ಸೀಗಡಿ, ಕಬ್ಬು, ತೊಗರಿ

| ಪ್ರಾಣಿ ಮೂಲ ಆಹಾರ | ಸಸ್ಯಮೂಲ ಆಹಾರ |
|---|---|
| | |

ಜಾವೇದ್ ಭಾಷಾ ಸ.ಹಿ.ಪ್ರಾ.ಶಾಲೆ ಕಂದಿಕೆರೆ, ಹಿರಿಯೂರು ತಾ, ಚಿತ್ರದುರ್ಗ ಜಿಲ್ಲೆ

ಮಾರ್ಗದರ್ಶಕರ ಸಹಿ ದಿನಾಂಕದೊಂದಿಗೆ


# ಅಭ್ಯಾಸ ಹಾಳೆ  ಪರಿಸರ ಅಧ್ಯಯನ

ವಿದ್ಯಾರ್ಥಿಯ ಹೆಸರು;-  ತರಗತಿ ;-4  ದಿನಾಂಕ;-

**************************************************** ******************************************************************************** ದಿನ-6


**ಕಲಿಕಾಫಲ;- ತಮ್ಮ ಸುತ್ತಲಿನ ಆಹಾರ ಮತ್ತು ಸಾಂಸ್ಕೃತಿಕ ವೈವಿಧ್ಯವನ್ನು ತಿಳಿಯುವರು.**








**1. ನೀಡಿರುವ ಚಿತ್ರಗಳನ್ನು ಗಮನಿಸಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1) ನಿಮ್ಮ ಮನೆಯಲ್ಲಿ ಆಚರಿಸುವ ಹಬ್ಬಗಳನ್ನು ಹೆಸರಿಸು.

2) ನೀನು ಭಾಗವಹಿಸಿರುವ ಸಮಾರಂಭಗಳು ಯಾವುವು?

3) ನಿನ್ನ ಶಾಲೆಯಲ್ಲಿ ಆಚರಿಸುವ ರಾಷ್ಟ್ರೀಯ ಹಬ್ಬಗಳು ಯಾವುವು?

4) ಜಾತ್ರೆಯ ಪ್ರಮುಖ ಅಕರ್ಷಣೆ ಯಾವುದು?

5) ದೀಪಗಳ ಹಬ್ಬ ಎಂದು ಯಾವ ಹಬ್ಬವನ್ನು ಕರೆಯುವರು?

**2. ಗೆರೆ ಎಳೆದು ಹೊಂದಿಸಿ**

| | |
|---|---|
| 1) ನಾಮಕರಣ | ರಾಷ್ಟ್ರೀಯ ಹಬ್ಬ |
| 2) ದಸರ | ದೀಪಗಳ ಹಬ್ಬ |
| 3) ಗಾಂಧೀಜಯಂತಿ | ಸಮಾರಂಭ |
| 4) ಜಾತ್ರೆ | ನಾಡಹಬ್ಬ |
| 5) ದೀಪಾವಳಿ | ತೇರು ಎಳೆಯುವುದು |

Edit with WPS Office

ಸಾಮರ್ಥ್ಯ :ನೀರಿನ ಮೂಲಗಳನ್ನು ಗುರುತಿಸುವರು. ದಿನ - 7

**ಚಟುವಟಿಕೆ -1 ಪೋಷಕರೊಂದಿಗೆ ಚರ್ಚಿಸಿ ಈ ಪ್ರಶ್ನೆಗಳಿಗೆ ಉತ್ತರಿಸಿ**

1. ನಿಮ್ಮ ಮನೆಯಲ್ಲಿ ನೀರನ್ನು ಎಲ್ಲಿಂದ ತರುತ್ತೀರಾ?

______________________________________________________________

2. ನಿಮ್ಮ ಊರಿನಲ್ಲಿ ಕೆರೆ ಇದೆಯಾ

______________________________________________________________

3. ನಿಮ್ಮ ಜಿಲ್ಲೆಯಲ್ಲಿ ಹರಿಯುವ ಒಂದು ನದಿ ಯನ್ನು ಹೆಸರಿಸಿ

_______________________________________________________________

4. ನೀನು ಸಮುದ್ರವನ್ನು ನೋಡಿದ್ದೀಯಾ

_______________________________________________________________

5.ನೀರನ್ನು ಸಂಗ್ರಹಿಸುವ ವಿವಿಧ ಪರಿಕರಗಳನ್ನು ಬರೆ

_______________________________________________________________


**ಚಟುವಟಿಕೆ -2**

**ವಿವಿಧ ನೀರಿನ ಮೂಲಗಳ ಚಿತ್ರಗಳನ್ನು ಕೆಳಗಿನ ಸ್ಥಳದಲ್ಲಿ ಬಿಡಿಸಿ ಬಣ್ಣ ತುಂಬು.**

## 5 ನೇ ತರಗತಿ. ಪರಿಸರ ಅಧ್ಯಯನ.

**ಕಲಿಕಾಂಶ :** ನೀರಿನ ಉಪಯೋಗಗಳನ್ನು ತಿಳಿಯುವರು. **ದಿನ - 8**


**1.ಈ ಚಿತ್ರಗಳನ್ನು ನೋಡಿ ನೀರಿನ ಉಪಯೋಗಗಳನ್ನು ಬರೆ.**



________________ ________________ ________________ ________________



________________ ________________ ________________ ________________

## 2.ನಿಮ್ಮ ಮನೆಯಲ್ಲಿ ಯಾವ ಯಾವ ಕೆಲಸಗಳಿಗೆ ನೀರು ಬಳಸುವೆ ಚಿತ್ರದೊಳಗೆ ಬರೆ.

ರೇಣುಕಾರಾಧ್ಯ ಸಂಕ್ಲಾಪುರ ತೀರ್ಥಹಳ್ಳಿ

**5 ನೇ ತರಗತಿ.** **ಪರಿಸರ ಅಧ್ಯಯನ.**

**ಕಲಿಕಾಂಶ : ನೀರು ಮಲಿನವಾಗುತ್ತದೆ ಎಂಬುದನ್ನು ತಿಳಿಯುವರು.** **ದಿನ - 9**

**1.ಈ ಕೆಳಗಿನ ಚಿತ್ರಗಳನ್ನು ನೋಡಿ ನೀರು ಹೇಗೆಲ್ಲಾ ಮಲಿನವಾಗುತ್ತಿದೆ ಗಮನಿಸಿ ಬರೆ.**








______________________________ ______________________________

______________________________







____________________________________________________________________________________

**2.ಮೇಲಿನ ಚಿತ್ರಗಳ ಮೂಲಕ ನೀರು ಹೇಗೆಲ್ಲಾ ಮಾಲಿನವಾಗುತ್ತಿದೆ ಎಂಬುದ ತಿಳಿದೆ ಹಾಗಾದರೆ ನೀರು ಮಲಿನವಾಗದಂತೆ ಹೇಗೆ ತಡೆಯುವೆ ಎಂಬುದನ್ನು ಬರೆ.**

**5 ನೇ ತರಗತಿ.                    ಪರಿಸರ ಅಧ್ಯಯನ.**

**3.ನೀರು ಹೇಗೆ ಮಾಲಿನವಾಗುತ್ತಿದೆ ಎಂಬುದನ್ನು ತಿಳಿಯಲು ಈ ಕೆಳಗಿನ ವಿಡಿಯೋ ನೋಡು**

**ವಿಡಿಯೋ ನೋಡಲು ಕೆಳಗಿನ ಲಿಂಕ್ ಕ್ಲಿಕ್ಕಿಸಿ**

**https://youtu.be/Om42Lppkd9w**

**4.ನೀರು ಮಲಿನ ಆಗುವುದರಿಂದ ನೀರಿನಲ್ಲಿ ವಾಸಿಸುವ ಜೀವಿಗಳಿಗೆ ಆಗುವ ತೊಂದರೆ ಏನು ಎಂಬುದನ್ನು ಯೋಚಿಸಿ ಬರೆ.**

**5.ಈ ಕೆಳಗಿನ ವಿಡಿಯೋ ನೋಡುವ ಮೂಲಕ ನೀರು ಮಲಿನ ಆಗುವುದನ್ನು ಹೇಗೆ ತಡೆಗಟ್ಟಬಹುದು ಎಂಬುದನ್ನು ತಿಳಿ**

**ವಿಡಿಯೋಗಾಗಿ ಈ ಕೆಳಗಿನ ಲಿಂಕ್ ಕ್ಲಿಕ್ಕಿಸಿ**

**https://youtu.be/vQHX54SO5-c**


Edit with WPS Office

ತರಗತಿ : 5 ಪರಿಸರ ಅಧ್ಯಯನ

**ಕಲಿವಿನ ಫಲ** : ಮಾನವ ದೇಹದ ಅಂಗಗಳ ಕಾರ್ಯಗಳನ್ನು ಅರ್ಥ ಮಾಡಿಕೊಂಡು ಉತ್ತಮ ಆರೋಗ್ಯವನ್ನು ಹೊಂದುವರು.

**ಕಲಿಕಾಂಶ :** ದೇಹದ ಭಾಗಗಳನ್ನು ಗುರುತಿಸಿ ಅವುಗಳ ಕಾರ್ಯಗಳನ್ನು ತಿಳಿಯುವರು. ದಿನ -10

1.ದೇಹದ ಭಾಗಗಳನ್ನು ನೋಡಿ ಅದರ ಕಾರ್ಯಗಳನ್ನು ಬರೆ.

| ಕ್ರ.ಸಂ. | ಚಿತ್ರ | ಹೆಸರು | ಕಾರ್ಯ |
|---|---|---|---|
| 1 |  | | |
| 2 |  | | |
| 3 |  | | |
| 4 |  | | |
| 5 |  | | |

2.ಬಿಟ್ಟ ಸ್ಥಳ ತುಂಬು.

1.ನಮಗೆ ನಡೆಯಲು ಸಹಾಯವಾಗುವ ಅಂಗ___________

2.ಶಬ್ದವನ್ನು ಆಲಿಸಲು ಸಹಾಯಕವಾಗುವ ಅಂಗ_________

3.ಆಹಾರವನ್ನು ಅಗಿಯಲು ಸಹಾಯಕ ಅಂಗ __________

3.ಕಣ್ಣಿನ ಚಿತ್ರ ಬರೆದು ಬಣ್ಣ ತುಂಬು.

ರುಕ್ಮಿಣಿ N

ಸ.ಹಿ.ಪ್ರಾ.ಶಾಲೆ ಭೀಮನಗರ ಇಜೇರಿ

# ಅಭ್ಯಾಸ ಹಾಳೆ ಪರಿಸರ ಅಧ್ಯಯನ


**ವಿದ್ಯಾರ್ಥಿಯ ಹೆಸರು;–** **ತರಗತಿ ;–5** **ದಿನಾಂಕ;–**

************************************************************************************************************************************ **ದಿನ–11**

**ಕಲಿಕಾಫಲ;– ದೇಹದಲ್ಲಿ ನಡೆಯುವ ಮುಖ್ಯ ಕ್ರಿಯೆಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ಅಂಗಗಳ ಪರಿಚಯ ಮಾಡಿಕೊಳ್ಳುವರು**


1. **ಕೆಳಗಿನ ಚಿತ್ರವನ್ನು ನೋಡಿ ನೀನು ಸೇವಿಸಿದ ಆಹಾರ ಬಾಯಿಯ ಮೂಲಕ ಪ್ರಾರಂಭವಾಗಿ ಅಂಗದಿಂದ ಅಂಗಕ್ಕೆ ಸಾಗುವ ಈ ಅಂಗಗಳು ಯಾವುವೆಂದು ಪಕ್ಕದಲ್ಲಿ ಬರೆ.**

**ಉತ್ತರ :**




ಚಿತ್ರ 19.13 ಮಾನವನ ಜೀರ್ಣಾಂಗವ್ಯೂಹ

2. **ಕೆಳಗಿನ ಚಿತ್ರವನ್ನು ನೋಡಿ ಇದರ ಭಾಗಗಳನ್ನು ಪಕ್ಕದಲ್ಲಿ ಬರೆ.**




3. **ಈ ಕೆಳಗಿನ ಅಂಗಗಳ ಕಾರ್ಯವನ್ನು ಬರೆಯಿರಿ.**

   1) ಜಠರ...................................................................................................

   2) ದೊಡ್ಡ ಕರುಳು...................................................................................................

   3) ಬಾಯಿ...................................................................................................

**ಮಾರ್ಗದರ್ಶಕರ ಸಹಿ ದಿನಾಂಕದೊಂದಿಗೆ**

# ಅಭ್ಯಾಸ ಹಾಳೆ ಪರಿಸರ ಅಧ್ಯಯನ

ವಿದ್ಯಾರ್ಥಿಯ ಹೆಸರು;– ತರಗತಿ ;–5 ದಿನಾಂಕ;–

****************************************************************************************************************************** ದಿನ–12

**ಕಲಿಕಾಫಲ;–** ಸ್ವಚ್ಛತೆಯ ಅಭ್ಯಾಸದಿಂದ ಉತ್ತಮ ಆರೋಗ್ಯವನ್ನು ಪಡೆಯಬಹುದೆಂದು ತೀರ್ಮಾನಿಸಿ ಅವುಗಳನ್ನು ರೂಢಿಸಿಕೊಳ್ಳುವ ಮನೋಭಾವವನ್ನು ಹೊಂದುವರು.

## 1 ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ನಾವು ಪ್ರತಿನಿತ್ಯ ಸ್ನಾನ ಏಕೆ ಮಾಡಬೇಕು?

2) ನಾಲಿಗೆಯನ್ನು ಹೇಗೆ ಸ್ವಚ್ಛಗೊಳಿಸಬೇಕು?

3) ಕೆಮ್ಮುವಾಗ ಮತ್ತು ಸೀನುವಾಗ ನಾವು ಹೇಗೆ ಎಚ್ಚರಿಕೆ ವಹಿಸಬೇಕು?

## 2 ಈ ಹೇಳಿಕೆಗಳನ್ನು ಸರಿಪಡಿಸಿ ಬರೆಯಿರಿ.

1) ಎಣ್ಣೆಯಿಂದ ಮಸಾಜ್ ಮಾಡುವುದರಿಂದ ಚರ್ಮವು ಹಾಳಾಗುತ್ತದೆ.

2) ಮೂಗನ್ನು ಪ್ರತಿನಿತ್ಯ ಸ್ವಚ್ಛಗೊಳಿಸಬಾರದು.

3) ಪ್ರತಿದಿನ ಹಲ್ಲನ್ನು ಉಜ್ಜಬಾರದು.

## 3. ಕೆಮ್ಮವಾಗ ಬಾಯಿಗೆ ಅಡ್ಡಲಾಗಿ ಕರವಸ್ತ್ರ ಮುಚ್ಚಿಕೊಳ್ಳಬೇಕು ಏಕೆ?

## 4. ಈ ಕೆಳಗಿನವುಗಳನ್ನು ತಪ್ಪದೆ ಪಾಲಿಸಿರಿ

1) ನಿಗಧಿತ ಸಮಯದಲ್ಲಿ ಆಹಾರ ಸೇವನೆ, ಮಲಮೂತ್ರ ವಿಸರ್ಜನೆ ಮಾಡುವ ಅಭ್ಯಾಸ ಮಾಡಿಕೊ

2) ಪ್ರತಿದಿನ ಆಟ ಆಡು, ವ್ಯಾಯಾಮ ಮಾಡು, ಸಾಕಷ್ಟು ನಡೆಯುವ ಅಭ್ಯಾಸ ಮಾಡಿಕೊ.

3) ಪ್ರತಿನಿತ್ಯ ಸ್ನಾನ ಮಾಡುವುದನ್ನು ಅಭ್ಯಾಸ ಮಡಿಕೊಳ್ಳಿರಿ, ಶುಚಿಯಾಗಿಟ್ಟು ಕೊಳ್ಳಿರಿ.

ಮಾರ್ಗದರ್ಶಕರ ಸಹಿ ದಿನಾಂಕದೊಂದಿಗೆ

# ಪರಿಸರ ಅಧ್ಯಯನ – ಅಭ್ಯಾಸ ಹಾಳೆ

**ವಿದ್ಯಾರ್ಥಿಯ ಹೆಸರು:–** **ತರಗತಿ;–** **ದಿನಾಂಕ: ––––––** **ದಿನ–13**

************************************************************************************************************************************

**ಕಲಿಕಾಫಲ;– ಸಾರಿಗೆ ಮತ್ತು ಸಂಪರ್ಕ ಸಾಧನಗಳ ಪ್ರಾಮುಖ್ಯತೆಯನ್ನು ಅರಿತು ವಿವೇಚನೆಯಿಂದ ಬಳಸುವರು.**

**ಕಲಿಕಾಂಶ;– ಕಾಲಕಾಲಕ್ಕೆ ಸಾರಿಗೆ ಮತ್ತು ಸಂಪರ್ಕದಲ್ಲಿ ಆದ ಬದಲಾವಣೆಗಳನ್ನು ತಿಳಿಯುವರು.**

1. **ಕೆಳಕಂಡ ಚಿತ್ರಗಳನ್ನು ಹೆಸರಿಸಿ ಉಪಯೋಗ ಬರೆ**

| ಕ್ರ.ಸಂ | ಚಿತ್ರ | ಹೆಸರು | ಉಪಯೋಗ |
|---|---|---|---|
| 1 |  | | |
| 2 |  | | |
| 3 |  | | |
| 4 |  | | |

2. **ಕೆಳಕಂಡ ಚಿತ್ರಗಳನ್ನು ಗಮನಿಸಿ ಹೆಸರಿಸಿ.**









3. **ನಿಮ್ಮ ಹಿರಿಯರ ಸಹಕಾರದೊಂದಿಗೆ ಚರ್ಚಿಸಿ. ಕೆಳಕಂಡ ಚಿತ್ರನಕಾಶೆ ಗಮನಿಸಿ ಕೊಟ್ಟಿರುವ ವಿವರಗಳನ್ನು ಓದಿ ನಂತರ ಹೊಂದಿಸು**



# ಪರಿಸರ ಅಧ್ಯಯನ – ಅಭ್ಯಾಸ ಹಾಳೆ

ವಿದ್ಯಾರ್ಥಿಯ ಹೆಸರು:– ತರಗತಿ;– ದಿನಾಂಕ: –––––– ದಿನ–14

************************************************************************************************************************************************************

**ಕಲಿಕಾಫಲ;–** ಸಾರಿಗೆ ಮತ್ತು ಸಂಪರ್ಕ ಸಾಧನಗಳ ಪ್ರಾಮುಖ್ಯತೆಯನ್ನು ಅರಿತು ವಿವೇಚನೆಯಿಂದ ಬಳಸುವರು.

ಕಲಿಕಾಂಶ;– ವಿವಿಧ ವಾಹನಗಳನ್ನು ಸಾರಿಗೆಯ ವಿಧಗಳಿಗೆ ಅನುಸಾರವಾಗಿ ವರ್ಗೀಕರಿಸುವರು.

ಸಾರಿಗೆಯಲ್ಲಿ 3 ವಿಧಗಳಿವೆ. 1) ಭೂಸಾರಿಗೆ, 2) ಜಲಸಾರಿಗೆ, 3) ವಾಯುಸಾರಿಗೆ

ಭೂಸಾರಿಗೆ;– ಭೂಮಿಯ ಮೇಲೆ ಚಲಿಸುವ ವಾಹನಗಳಿಗೆ ಭೂಸಾರಿಗೆ ಎನ್ನುವರು.

ಜಲಸಾರಿಗೆ;– ನೀರಿನ ಮೇಲೆ ಚಲಿಸುವ ವಾಹನಗಳಿಗೆ ಜಲಸಾರಿಗೆ ಎನ್ನುವರು.

ವಾಯುಸಾರಿಗೆ;– ಗಾಳಿಯ ಸಹಾಯದಿಂದ ಆಕಾಶದಲ್ಲಿ ಚಲಿಸುವ ವಾಹನಗಳಿಗೆ ವಾಯುಸಾರಿಗೆ ಎನ್ನುವರು.

1. **ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

   1) ಸಾರಿಗೆಗಳಲ್ಲಿ ಎಷ್ಟು ವಿಧಗಳಿವೆ?

   2) ಭೂಸಾರಿಗೆ ಎಂದರೇನು? ಎರಡು ಉದಾಹರಣೆ ಕೊಡಿ.

   3) ವಾಯು ಸಾರಿಗೆ ಎಂದರೇನು? ಎರಡು ಉದಾಹರಣೆ ಕೊಡಿ.

   4) ಜಲಸಾರಿಗೆ ಎಂದರೇನು? ಎರಡು ಉದಾಹರಣೆ ಕೊಡಿ.

2. **ನಿಮಗೆ ಇಷ್ಟವಾದ ವಾಹನದ ಚಿತ್ರ ಬಿಡಿಸಿ ಬಣ್ಣ ಹಚ್ಚು.**

೩. ನಿಮ್ಮ ಹಿರಿಯರ ಸಹಕಾರದೊಂದಿಗೆ ಚರ್ಚಿಸಿ. ಭೂಸಾರಿಗೆ, ಜಲಸಾರಿಗೆ, ವಾಯುಸಾರಿಗೆಗೆ ಸಂಬಂಧಿಸಿದ ವಾಹನ ಚಿತ್ರಗಳ ಆಲ್ಬಂ ತಯಾರಿಸು. ಪೋಟೋ ತೆಗೆದು ಬೇರೆಯವರಿಗೆ ಹಂಚಿಕೊ.

# ಪರಿಸರ ಅಧ್ಯಯನ – ಅಭ್ಯಾಸ ಹಾಳೆ

ವಿದ್ಯಾರ್ಥಿಯ ಹೆಸರು:- ತರಗತಿ;- ದಿನಾಂಕ: ------ ದಿನ-15

---

**ಕಲಿಕಾಫಲ;-** ಸಾರಿಗೆ ಮತ್ತು ಸಂಪರ್ಕ ಸಾಧನಗಳ ಪ್ರಾಮುಖ್ಯತೆಯನ್ನು ಅರಿತು ವಿವೇಚನೆಯಿಂದ ಬಳಸುವರು.
ಕಲಿಕಾಂಶ;- ಸಾರಿಗೆಗಾಗಿ ಬಳಸುವ ಪ್ರಾಣಿಗಳ ಬಗ್ಗೆ ಸಂವೇದನಾಶೀಲವಾಗಿ ವರ್ತಿಸುವಂತಹ ಮನೋಭಾವನೆ ಬೆಳೆಸಿಕೊಳ್ಳುವರು.

ಡಿಜಿಟಲ್ ಸಂಪರ್ಕ ಸಾಧನಗಳನ್ನು ಅಗತ್ಯವಿದ್ದಾಗ ಮಾತ್ರ ಮಿತವಾಗಿ ಮತ್ತು ಸುರಕ್ಷಿತವಾಗಿ ಬಳಸಬೇಕೆಂದು ತಿಳಿಯುವರು.

1. ಕೋಷ್ಟಕ ನೋಡಿ ಸಂಪರ್ಕ ಸಾಧನಗಳ ಉಪಯೋಗ ಬರೆಯಿರಿ.

| | | |
|---|---|---|
| 1 |  | |
| 2 |  | |
| 3 |  | |
| 4 |  | |
| 5 |   | |


2. ಮಕ್ಕಳೇ ಕೋವಿಡ್ -19 ಸಂದಿಗ್ಧ ಪರಿಸ್ಥಿಯಲ್ಲಿ ನಿಮಗೆ ಮೊಬೈಲ್ ಬಳಕೆಯಿಂದ ಆಗುವ ಅನುಕೂಲಗಳನ್ನು ಪಟ್ಟಿ ಮಾಡಿ


3. **ಈ ಕೆಳಕಂಡ ಲಿಂಕ್ ಮುಖೇನ ಸಾರಿಗೆ ಮತ್ತು ಸಂಪರ್ಕಕ್ಕೆ ಸಂಬಂಧಿಸಿದ ವಿಡಿಯೋವನ್ನು ವೀಕ್ಷಿಸಿ.**
   **https://youtu.be/eQn6jdYKNxw**


4. **ಕೆಳಕಂಡ ಚಿತ್ರಗಳನ್ನು ಹೆಸರಿಸಿ ಬಣ್ಣ ಹಾಕಿ**









# ಅಭ್ಯಾಸ ಹಾಳೆ ಪರಿಸರ ಅಧ್ಯಯನ

ವಿದ್ಯಾರ್ಥಿಯ ಹೆಸರು;– ತರಗತಿ ;–5 ದಿನಾಂಕ;–

****************************************************************************************************************************** ದಿನ–16

**ಕಲಿಕಾಫಲ;– ಅಪಘಾತದ ಕಾರಣವನ್ನು ಪಟ್ಟಿ ಮಾಡುವರು.**

1. **ಕೆಳಗಿನ ಹೇಳಿಕೆಗಳು ಸರಿಯೇ ತಪ್ಪೇ ತಿಳಿಸಿ**

1) ಚಾಕುವಿನಿಂದ ತರಕಾರಿಗಳನ್ನು ಬೇಗ ಬೇಗ ಹಚ್ಚಬೇಕು [ ]

2) ಅವಸರದಲ್ಲಿ ರಸ್ತೆಯನ್ನು ದಾಟಬಾರದು. [ ]

3) ಹಿರಿಯರ ಸಹಾಯವಿಲ್ಲದೆ ಗ್ಯಾಸ್ ಒಲೆ ಹಚ್ಚಬಾರದು [ ]

4) ಪೆನ್ಸಿಲ್ ಎರೆಯುವಾಗ ಮೆಂಡರ್ ಬಳಸಬೇಕು. [ ]

5) ಬೈಕ್‌ನಲ್ಲಿ 3 ಜನ ಪ್ರಯಾಣ ಮಾಡಬೇಕು. [ ]

2. **ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1) ಪಾದಾಚಾರಿಗಳು ರಸ್ತೆಯನ್ನು ಎಲ್ಲಿ ಸುಭವಾಗಿ ದಾಟಬಹುದು?

2) ಶಾಲೆಯ ಬಳಿ "ಶಾಲಾವಲಯ ನಿಧಾನವಾಗಿ ಚಲಿಸಿ" ಎಂಬ ಸೂಚನಾಫಲಕವನ್ನು ಏಕೆ ಹಾಕಿರುತ್ತಾರೆ?

3) ತೆರೆದಿರುವ ವಿದ್ಯುತ್ ತಂತಿಗಳನ್ನು ಏಕೆ ಮುಟ್ಟಬಾರದು?

4) ಸಾಮಾನ್ಯವಾಗಿ ಮನೆಯಲ್ಲಿ ಯಾವ ವಸ್ತುಗಳಿಂದ ನಮಗೆ ಅಪಘಾತವಾಗುವುದು?


## ಅಭ್ಯಾಸ ಹಾಳೆ   ಪರಿಸರ ಅಧ್ಯಯನ

ವಿದ್ಯಾರ್ಥಿಯ ಹೆಸರು;–                                   ತರಗತಿ ;–5        ದಿನಾಂಕ;–

****************************************************************************************************************** ದಿನ–17

**ಕಲಿಕಾಫಲ;– ಸಂಚಾರಿ ಸಂಕೇತಗಳನ್ನು ಓದುವರು.**

1 **ಕೆಳಗೆ ಕೊಟ್ಟಿರುವ ಸಂಚಾರಿ ಸಂಕೇತಗಳನ್ನು ಅವುಗಳಿಗೆ ಸರಿ ಹೊಂದುವ ಸೂಚನೆಗಳಿಗೆ ಗೆರೆ ಎಳೆದು ಹೊಂದಿಸಿ.**

| ಸಂಚಾರಿ ಸಂಕೇತಗಳು | ಸೂಚನೆಗಳು |
|---|---|
|  | ವಾಹನಗಳನ್ನು ನಿಲ್ಲಿಸ ಬಹುದು |
|  | ಜೋರಾಗಿ ಶಬ್ದ ಮಾಡಬಾರದು |
|  | ರೈಲ್ವೆ ಕ್ರಾಸಿಂಗ್ ನೋಡಿ ದಾಟಬೇಕು |
|  | ರಸ್ತೆಯಲ್ಲಿ ಉಬ್ಬು ಇದೆ ನಿಧಾನವಾಗಿ ಚಲಿಸಿ |
|  | ಎಡಕ್ಕೆ ಚಲಿಸಿ |

2 **ಈ ಕೆಳಗಿನ ಸರಿಯೇ ತಪ್ಪೇ ಗುರ್ತಿಸಿ**

1) ರಸ್ತೆ ದಾಟಲು ಝೀಬ್ರಾ ಪಟ್ಟಿಯನ್ನು ಬಳಸಬೇಕು. [ ]

2) ರಸ್ತೆಯ ಮಧ್ಯದಲ್ಲಿ ಆಟ ಆಡಬೇಕು. [ ]

3) ಸರದಿ ಸಾಲಿನಲ್ಲಿ ನಿಂತು ವಾಹನ ಹತ್ತಬೇಕು. [ ]

4) ವಾಹನ ಚಾಲಕರು ಸಂಕೇತ ದೀಪಗಳನ್ನು ಅನುಸರಿಸಬೇಕು. [ ]

5) ರೈಲು ಬರುವಾಗ ರೈಲ್ವೆ ಲೆವೆಲ್ ಕ್ರಾಸಿಂಗ್ ದಾಟಬಹುದು. [ ]

# ಅಭ್ಯಾಸ ಹಾಳೆ ಪರಿಸರ ಅಧ್ಯಯನ

ವಿದ್ಯಾರ್ಥಿಯ ಹೆಸರು;– ತರಗತಿ ;–5 ದಿನಾಂಕ;–

************************************************************************************************************************ ದಿನ–18

ಕಲಿಕಾಫಲ;– ರಸ್ತೆ ಸುರಕ್ಷತಾ ನಿಯಮಗಳನ್ನು ತಿಳಿದು ಪಾಲಿಸುವರು. ಮನೆ ಒಳಗೆ ಹೊರಗೆ ಆಗುವ ಅಪಘಾತಗಳನ್ನು ತಿಳಿದು ಎಚ್ಚರ ವಹಿಸುವರು.

1. ಹೊಂದಿಸಿ ಬರೆಯಿರಿ

| | | |
|---|---|---|
| 1) ಪೆನ್ಸಿಲ್ | ಚಾಕು | ............................................. |
| 2) ತರಕಾರಿ | ಅಪಾಯ | ............................................. |
| 3) ಗ್ಯಾಸ್ ಒಲೆ | ರಸ್ತೆ ದಾಟುವುದು | ............................................. |
| 4) ಅವಸರವೇ | ಮೆಂಡರ್ | ............................................. |
| 5) ಝೀಬ್ರಾಪಟ್ಟಿ | ಅಡುಗೆ | ............................................. |

2. ಕೆಳಗಿನ ಹೇಳಿಕೆಗಳನ್ನು ಸರಿಪಡಿಸಿ ಬರೆಯಿರಿ.

1) ರಸ್ತೆ ದಾಟುವಾಗ ಅವಸರವಾಗಿ ದಾಟಬೇಕು

2) ಸಾರ್ವಜನಿಕ ವಾಹನಗಳನ್ನು ಬಳಸುವುದು ಬೇಡ

3) ನಾವು ತರಕಾರಿಗಳನ್ನು ಅವಸರದಿಂದ ಹೆಚ್ಚಬೇಕು.

4) ನಾವು ವಿದ್ಯುತ್ ಕಂಬಗಳನ್ನು ಹತ್ತಿ ಆಟ ಆಡಬೇಕು.

Edit with WPS Office

**ತರಗತಿ - 5** | **ಪರಿಸರ ಅಧ್ಯಯನ** | **ದಿನ -19**

**ವಿದ್ಯಾರ್ಥಿಯ ಹೆಸರು :**

**ಕಲಿಕಾಂಶ :** ಸ್ಥಳೀಯ ಸಂಸ್ಕೃತಿಯನ್ನು ಬಿಂಬಿಸುವ ಹಬ್ಬ ಜಾತ್ರೆ ಇತ್ಯಾದಿಗಳನ್ನು ಪಟ್ಟಿ ಮಾಡುವರು .

**ಕಲಿಕಾ ಫಲ :** ನಮ್ಮ ರಾಜ್ಯದ ಜನರ ವಿವಿಧ ಆಹಾರ ಪದ್ಧತಿ ಮತ್ತು ವೈವಿಧ್ಯತೆಯನ್ನು ಮೆಚ್ಚುವರು .

1.ಹೊಂದಿಸಿ ಬರೆಯಿರಿ


| | |
|---|---|
| 1.ಹಬ್ಬ | ಮುದ್ದೆ |
| 2.ಗೋಧಿ | ರಂಜಾನ್ |
| 3.ರಾಗಿ | ಮಾರಿ ಜಾತ್ರೆ |
| 4.ಜಾತ್ರೆ | ಚಪಾತಿ |

**ಹಬ್ಬ :** ಒಂದೇ ಧರ್ಮಕ್ಕೆ ಸೇರಿದ ಜನರು ತಮ್ಮ ತಮ್ಮ ಮನೆಗಳಲ್ಲಿ ಆಚರಿಸುವ ಸಾಂಪ್ರದಾಯಿಕ ಆಚರಣೆಗಳು.

**ಜಾತ್ರೆ :** ಸುತ್ತಮುತ್ತಲಿನ ಊರಿನ ಜನರೆಲ್ಲರೂ ಯಾವುದೇ ಭೇದ ಭಾವಗಳಿಲ್ಲದೆ ಒಟ್ಟಾಗಿ ಸೇರಿ ಆಚರಿಸುವ ಆಚರಣೆ.

2. ನಿಮ್ಮ ಮನೆಯಲ್ಲಿ ಆಚರಿಸುವ ಹಬ್ಬಗಳಿಗೆ ಸರಿ ಗುರುತು ಹಾಕು .



ಚ ಫ





Edit with WPS Office

3.ಬಿಟ್ಟ ಸ್ಥಳ ತುಂಬಿರಿ

1.ಹಬ್ಬಗಳ ದಿನದಂದು ಮನೆಯ ಬಾಗಿಲಿಗೆ ------------ ಕಟ್ಟುವರು. ( ತೋರಣ, ಹೂರಣ)

2.ಜಾತ್ರೆಯಲ್ಲಿ ದೇವರ ----------- ಮಾಡುವರು.( ಮೆರವಣಿಗೆ , ಬರವಣಿಗೆ )

3 .ಹಬ್ಬದ ದಿನಗಳಂದು ಎಲ್ಲರೂ ---------- ಧರಿಸುವರು . ( ಹೊಸ ಬಟ್ಟೆ ,ಹಳೆ ಬಟ್ಟೆ )

3.ಕೊಟ್ಟಿರುವ ಚಿತ್ರವನ್ನು ಗಮನಿಸಿ 4 ವಾಕ್ಯಗಳನ್ನು ಬರೆ



1.______________________________

2.______________________________

3.______________________________

4.______________________________

4. ಹಬ್ಬದ ದಿನಗಳಂದು ನಿಮ್ಮ ಮನೆಯಲ್ಲಿ ಮಾಡುವ ವಿಶೇಷ ತಿನಿಸುಗಳನ್ನು ಹೆಸರಿಸಿ

________________________________________________________

________________________________________________________

5.ಗುಂಪಿಗೆ ಸೇರದ ಪದ ಗುರುತಿಸಿ

1.ದೀಪಾವಳಿ ,ಯುಗಾದಿ ,ರಂಜಾನ್ ,ಸಂಕ್ರಾಂತಿ .

2.ಕ್ರಿಸ್ ಮಸ್, ಬಕ್ರೀದ್, ಗಣರಾಜ್ಯೋತ್ಸವ ,ಈದ್ ಮಿಲಾದ್ .

3. ಹೋಳಿಗೆ ,ಪಾಯಸ ,ಕೇಸರಿಬಾತು, ಚಕ್ಕುಲಿ .

4. ರಂಗೋಲಿ, ತಳಿರು ತೋರಣ ,ಹೂವಿನ ಅಲಂಕಾರ ,ಕಸದ ಬುಟ್ಟಿ.

.

ಸುರಕ್ಷಿತ ಕೆ.ಜಿ ಸಹಿ ಪ್ರಾ ಶಾಲೆ ಹುತ್ತಳ್ಳಿ.

ತೀರ್ಥಹಳ್ಳಿ ತಾಲ್ಲೂಕು

ಮಾರ್ಗದರ್ಶಕರ ಸಹಿ : ದಿನಾಂಕ :

ತರಗತಿ : 5 ಪರಿಸರ ಅಧ್ಯಯನ ದಿನ : 20

ವಿದ್ಯಾರ್ಥಿಯ ಹೆಸರು :

ಕಲಿಕಾ ಫಲ: ನಮ್ಮ ರಾಜ್ಯದಲ್ಲಿನ ಬೇರೆ ಬೇರೆ ಭಾಗದ ಜನರ ಉಡುಪು, ಆಹಾರ ಪದ್ಧತಿಯ ವೈವಿಧ್ಯತೆಯನ್ನು ತಿಳಿಯುವರು.

1. ಹೊಂದಿಸಿ ಬರೆಯಿರಿ

| | |
|---|---|
| 1.ಮಳೆಗಾಲ | ಹತ್ತಿ ಬಟ್ಟೆ |
| 2.ಚಳಿಗಾಲ | ಮಳೆ ಕೋಟು |
| 3. ಸೀರೆ | ಉಣ್ಣೆ ಬಟ್ಟೆ |
| 4.ಬೇಸಿಗೆ ಕಾಲ | ನೂಲು |

2.ಕೆಳಗೆ ನೀಡಿದ ತಿನಿಸುಗಳನ್ನು ಹೆಸರಿಸಿ .








________ ________ ________







________ ________ ________

3.ಗುಂಪಿಗೆ ಸೇರದ ಪದ ಗುರುತಿಸು.

1. ಸೀರೆ ,ಅಂಗಿ ,ರವಿಕೆ ,ಚೂಡಿದಾರ .

2. ದೋಸೆ ,ರೊಟ್ಟಿ ,ಉಪ್ಪಿಟ್ಟು, ಹಾಲು .

Edit with WPS Office

3. ಕೆಳಗೆ ನೀಡಿರುವ ಉಡುಪುಗಳನ್ನು ಹೆಸರಿಸು



_____________ ____________ ____________

4. ನೀನು ಧರಿಸುವ ಉಡುಪುಗಳನ್ನು ಹೆಸರಿಸು .

_______________________________________

5. ಯಾವುದಾದರೂ 5 ಬೆಳಗಿನ ಉಪಹಾರಗಳನ್ನು ಹೆಸರಿಸು.

_______________________________________

_______________________________________

ಸುರಕ್ಷಿತ ಕೆ.ಜಿ
ಸ.ಹಿ.ಪ್ರಾ ಶಾಲೆ
ಹುತ್ತಳ್ಳಿ
ತೀರ್ಥಹಳ್ಳಿ


ಮಾರ್ಗದರ್ಶಕರ ಸಹಿ : ದಿನಾಂಕ :

Edit with WPS Office

# ಪರಿಸರ ಅಧ್ಯಯನ – ಅಭ್ಯಾಸ ಹಾಳೆ

ವಿದ್ಯಾರ್ಥಿಯ ಹೆಸರು:– ತರಗತಿ;– ದಿನಾಂಕ: ------ ದಿನ:21

**ಕಲಿಕಾಂಶ**: ಭಾರತದ ನಕ್ಷೆಯಲ್ಲಿ ಕರ್ನಾಟಕವನ್ನು ಮತ್ತೆ ಅದರ ನೆರೆಹೊರೆ ರಾಜ್ಯಗಳನ್ನು ಗುರುತಿಸುವರು.

| ಭಾರತದ ನಕ್ಷೆ | ಕರ್ನಾಟಕದ ನಕ್ಷೆ |
|---|---|
|  |  |





## 1. ಭಾರತದ ನಕ್ಷೆಯನ್ನು ವೀಕ್ಷಿಸಿ 28 ರಾಜ್ಯಗಳನ್ನು ಹೆಸರಿಸು.

| | | | |
|---|---|---|---|
| 1 | | 15 | |
| 2 | | 16 | |
| 3 | | 17 | |
| 4 | | 18 | |
| 5 | | 19 | |
| 6 | | 20 | |
| 7 | | 21 | |
| 8 | | 22 | |
| 9 | | 23 | |
| 10 | | 24 | |
| 11 | | 25 | |
| 12 | | 26 | |
| 13 | | 27 | |
| 14 | | 28 | |

**2. ಬಿಟ್ಟ ಸ್ಥಳವನ್ನು ಸರಿಯಾದ ಉತ್ತರದಿಂದ ತುಂಬಿರಿ.**


1. ಕರ್ನಾಟಕದ ಪೂರ್ವಕ್ಕಿರುವ ರಾಜ್ಯ_______________
2. ಗೋವಾ ಕರ್ನಾಟಕದ _____________ ದಿಕ್ಕಿಗಿದೆ.
3. ಕರ್ನಾಟಕದ ದಕ್ಷಿಣಕ್ಕಿರುವ ರಾಜ್ಯಗಳು ______________________________
4. ನಿಮ ರಾಜ್ಯ್ಯ ________________
5. ಕರ್ನಾಟಕದಲ್ಲಿ ________________ ಜಿಲ್ಲೆಗಳಿವೆ.
6. ಕರ್ನಾಟಕದ ಉತ್ತರಕ್ಕಿರುವ ರಾಜ್ಯ _______________.

**3. ಕರ್ನಾಟಕ ರಾಜ್ಯದ ನಕ್ಷೆಯನ್ನು ಬಿಡಿಸಿ ಬಣ್ಣ ತುಂಬಿರಿ.**

Edit with WPS Office

**ಕಲಿಕಾಂಶ :ಕರ್ನಾಟಕದ ಸ್ವಾಭಾವಿಕ ವಿಭಾಗಗಳ ಪರಿಚಯ ಮಾಡಿಕೊಳ್ಳುವರು.** ದಿನ - 22


**1.ಈ ಕೆಳಗಿನ ನಕ್ಷೆಯ ಮೂಲಕ ಕರ್ನಾಟಕದ ಸ್ವಾಭಾವಿಕ ಲಕ್ಷಣಗಳನ್ನು ತಿಳಿ.**








**ಸ್ಕ್ಯಾನ್ ಮಾಡಿ ಕರ್ನಾಟಕದ ಬಗ್ಗೆ ತಿಳಿಯಿರಿ**


**ಕರ್ನಾಟಕದ ಸ್ವಾಭಾವಿಕ ಲಕ್ಷಣಗಳನ್ನು ಓದಿ ತಿಳಿ .**



Edit with WPS Office




**★ನಿನ್ನ ಜಿಲ್ಲೆ ಯಾವ ಸ್ವಾಭಾವಿಕ ಲಕ್ಷಣದಲ್ಲಿ ಬರುತ್ತದೆ ಗಮನಿಸಿ ಆ ಹೂವಿನ ದಳದ ಚಿತ್ರವನ್ನು ರಚಿಸು.**

**ರೇಣುಕಾರಾಧ್ಯ ತೀರ್ಥಹಳ್ಳಿ**

Edit with WPS Office

ತರಗತಿ:5 ಪರಿಸರ ಅಧ್ಯಯನ ಅಭ್ಯಾಸ ಹಾಳೆ ದಿನ:23

ವಿದ್ಯಾರ್ಥಿ ಹೆಸರು :

ಕಲಿಕಾಂಶ: ನಮ್ಮ ರಾಜ್ಯದ ಐತಿಹಾಸಿಕ ಸ್ಥಳಗಳ ಮತ್ತು ನಿಸರ್ಗದಾಮಗಳ ಪರಿಚಯ ,ಅವುಗಳ ಸಂರಕ್ಷಣೆ ಬಗ್ಗೆ ತಿಳಿಯುವರು.

ಕಲಿಕಾ ಫಲ: ನಮ್ಮ ರಾಜ್ಯದ ವೈವಿಧ್ಯತೆಯನ್ನು ಅರಿತು ಹೆಮ್ಮೆ ಪಡುವರು.

1. ಐತಿಹಾಸಿಕ ಸ್ಥಳಗಳ ಚಿತ್ರಗಳನ್ನು ಸಂಗ್ರಹಿಸಿ ಕೆಳಗೆ ನೀಡಿದ ಖಾಲಿ ಜಾಗದಲ್ಲಿ ಅಂಟಿಸು.

| | | |
|---|---|---|
| | | |

2.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1.ನಿನಗೆ ತಿಳಿದ 2 ಪಕ್ಷಿಧಾಮಗಳನ್ನು ಹೆಸರಿಸಿ

______________________________________________

2.ಪ್ರಾಣಿಗಳ ಸಂರಕ್ಷಣೆ ಮಾಡುವ ಸ್ಥಳವನ್ನು ಏನೆಂದು ಕರೆಯುವರು ?

______________________________________________

3.ನಿನಗೆ ತಿಳಿಯದ 2 ಪ್ರವಾಸಿ ತಾಣಗಳನ್ನು ಹೆಸರಿಸಿ

______________________________________________

4.ಯಾವುದಾದರೂ ಒಂದು ಜಲಪಾತವನ್ನು ಹೆಸರಿಸಿ

______________________________________________

5. ಪ್ರವಾಸಿ ತಾಣಗಳನ್ನು ಹೇಗೆ ಸ್ವಚ್ಛವಾಗಿಡುವೆ?

______________________________________________

Edit with WPS Office

3.ಹೊಂದಿಸಿ ಬರೆಯಿರಿ

| | |
|---|---|
| 1. ಅರಮನೆ | ನದಿ |
| 2.ಹಂಪೆ | ಗಿರಿಧಾಮ |
| 3.ಕಾವೇರಿ | ಮೈಸೂರು |
| 4.ನಂದಿ ಬೆಟ್ಟ | ಐತಿಹಾಸಿಕ ಸ್ಥಳ |

4. ಸರಿ ತಪ್ಪು ತಿಳಿಸು

1.ಸಕಲ ಪ್ರಾಣಿಗಳಲ್ಲಿ ನಮಗೆ  ದಯೆ ಇರಬೇಕು.

2.ಪ್ರವಾಸಿ ತಾಣಗಳನ್ನು ಸ್ವಚ್ಛವಾಗಿಡಬಾರದು.

3.ಗಿರಿಧಾಮಗಳನ್ನು ಜನರು  ಚಾರಣ (ಟ್ರಕ್ಕಿಂಗ್ ) ಹೋಗುವರು .

5. ಕೆಳಗಿನ ಪ್ರವಾಸಿ ತಾಣಗಳನ್ನು   ಹೆಸರಿಸು. ಅವುಗಳ ಬಗ್ಗೆ ಎರಡು ವಾಕ್ಯದಲ್ಲಿ ವಿವರಣೆ  ಬರೆ.






________________________________    ________________________________

________________________________    ________________________________

________________________________    ________________________________

ಸುರಕ್ಷಿತ ಕೆ.ಜಿ. ಸ.ಹಿ.ಪ್ರಾ. ಶಾಲೆ ಹುತ್ತಳ್ಳಿ.. ತೀರ್ಥಹಳ್ಳಿ (ತಾ)

ಮಾರ್ಗದರ್ಶಕರ ಸಹಿ                                        ದಿನಾಂಕ

Edit with WPS Office

**ತರಗತಿ :5 ಪರಿಸರ ಅಧ್ಯಯನ ಅಭ್ಯಾಸ ಹಾಳೆ ದಿನ:24**

**ಕಲಿಕಾಂಶ :** ತ್ಯಾಜ್ಯಗಳನ್ನು ವರ್ಗೀಕರಿಸುವವರು .

**ಕಲಿಕಾ ಫಲ :** ಕಸವನ್ನು ನಿರ್ವಹಿಸುವ ಮತ್ತು ಕಸವನ್ನು ಪುನರ್ ಬಳಸುವ ಕೌಶಲವನ್ನು ತಮ್ಮದಾಗಿಸಿಕೊಳ್ಳುವರು.


**ಹಸಿ ಕಸ :** ಕೊಳೆಯುವ/ಸಾವಯವಗೊಬ್ಬರ ಉತ್ಪಾದಿಸುವ ಕಸವಾಗಿದೆ .

**ಒಣ ಕಸ:** ಗಟ್ಟಿಯಾದ ಒಣಗಿದ ವಸ್ತುಗಳನ್ನು ಒಳಗೊಂಡಿರುತ್ತದೆ .

**ಅಪಾಯಕಾರಿ ಕಸ :** ಇವುಗಳ ಸರಿಯಾದ ವಿಲೇವಾರಿ ಆಗದಿದ್ದರೆ ನಮಗೆ ಅಪಾಯ ಉಂಟಾಗುತ್ತದೆ.

**1. ಕೆಳಗೆ ನೀಡಿರುವ ವಸ್ತುಗಳು ಯಾವ ಕಸದ ವಿಧವೆಂದು ತಿಳಿದು ವಿಂಗಡಿಸಿ.**

ತರಕಾರಿ ಸಿಪ್ಪೆ ,ಗಾಜು ,ಬ್ಲೇಡ್ ,ಕಾಗದ ,ಬಟ್ಟೆ ,ಸೊಪ್ಪು ,ಕೊಳೆತ ಹಣ್ಣು, ಪ್ಲಾಸ್ಟಿಕ್, ಸೂಜಿ , ಸಿರೆಂಜ್ , ಮೊಳೆ , ಬಲ್ಬ.




**2.ಸರಿ ತಪ್ಪು ತಿಳಿಸು**

1.ಕಸವನ್ನು ಎಲ್ಲೆಂದರಲ್ಲಿ ಬಿಸಾಡಬೇಕು .

2.ಬಾಳೆಹಣ್ಣಿನ ಸಿಪ್ಪೆಯನ್ನು ಕಸದ ತೊಟ್ಟಿಗೆ ಹಾಕುವೆ .

3.ಹಸಿ ಕಸಗಳನ್ನು ಗೊಬ್ಬರವಾಗಿ ಗಿಡಗಳಿಗೆ ಬಳಸಬೇಕು .

Edit with WPS Office

3.ಕಾರಣ ಕೊಡಿ

1.ನಿನ್ನ ಪೆನ್ಸಿಲ್ ಕಸವನ್ನು ಕಸದ ತೊಟ್ಟಿಗೆ ಹಾಕಬೇಕು .

______________________________________

2.ಅಪಾಯಕಾರಿ ಕಸವನ್ನು ಪ್ರತ್ಯೇಕವಾಗಿ ವಿಲೇವಾರಿ ಮಾಡಬೇಕು .

______________________________________

4.  ಕಸದ ವಸ್ತುಗಳನ್ನು ಉಪಯೋಗಿಸಿ ಕಸದಿಂದ ರಸ ಚಟುವಟಿಕೆ ಮಾಡ




ಈ ರೀತಿಯ  ಚಟುವಟಿಕೆ ನೀನು ಮಾಡು.

ಸುರಕ್ಷಿತ  ಕೆ.ಜಿ. ಸ.ಹಿ.ಪ್ರಾ.ಶಾಲೆ.ಹುತ್ತಳ್ಳಿ. ತೀರ್ಥಹಳ್ಳಿ ತಾಲ್ಲೂಕು.

ಮಾರ್ಗದರ್ಶಕರ ಸಹಿ                    ದಿನಾಂಕ :

# ಪರಿಸರ ಅಧ್ಯಯನ-ಅಭ್ಯಾಸ ಹಾಳೆ

ವಿಧ್ಯಾರ್ಥಿಯ ಹೆಸರು: _______ ತರಗತಿ: __ ದಿ: _________ ದಿನ:25

**ಕಲಿಕಾಂಶ:** ತ್ಯಾಜ್ಯದ ಸರಿಯಾದ ವಿಲೇವಾರಿ ಕ್ರಮಗಳನ್ನು ತಿಳಯುವರು

1. ಮಧ್ಯದಲ್ಲಿ ಕೊಟ್ಟಿರುವ ಕಸದ ಪದಾರ್ಥಗಳನ್ನು ಸಂಬಂಧಿಸಿದ ಬುಟ್ಟಿಯಲ್ಲಿ ಹಾಕಿರಿ

ಹಸಿ ಕಸ

ಒಣಕಸ

**ಕಸಗಳು**

ಚೂರು ಕಾಗದಗಳು, ತರಕಾರಿ ಸಿಪ್ಪೆ, ಬಣ್ಣಗಳು, ಸಿರಿಂಜ್ ಗಳು, ಗಾಯದ ಪಟ್ಟಿಗಳು, ಒಡೆದ ಬಲ್ಬು, ಕೊಳೆತ ಪದಾರ್ಥ, ಗಾಜು, ಚಿಂದಿ ಬಟ್ಟೆಗಳು, ಕೀಟನಾಶಕಗಳು,

ವಿಷಕಾರಿ ಕಸ

ಮಲಿನ ಕಸ

2. ಎರಡು ಮೂರು ವಾಕ್ಯಗಳಲ್ಲಿ ವಿವರಣೆ ಬರೆ

1) ಹಸಿ ಕಸ

2) ಒಣ ಕಸ

# ಅಭ್ಯಾಸ ಹಾಳೆ ಪರಿಸರ ಅಧ್ಯಯನ

ವಿದ್ಯಾರ್ಥಿಯ ಹೆಸರು;– ತರಗತಿ ;–5 ದಿನಾಂಕ;–

************************************************************************************************************************************ ದಿನ–26

**ಕಲಿಕಾಫಲ;– ಕಸದ ವಿಧಗಳನ್ನು ತಿಳಿಯುವರು**

1. **ಕೋಷ್ಟಕದಲ್ಲಿ ಕೊಟ್ಟಿರುವ ಕಸದ ವಿಧಗಳಿಗೆ ಉದಾಹರಣೆ ಕೊಡಿ**

| ಹಸಿ ಕಸ | ಒಣ ಕಸ | ಅಪಾಯಕಾರಿ ಕಸ |
|---|---|---|
| | | |

2. **ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1) ಕಸ ಎಂದರೇನು?

2) ಕಸದ ವಿಧಗಳನ್ನು ಹೆಸರಿಸು.

3) ನಿಮ್ಮ ಮನೆಯಲ್ಲಿ ಕಸ ಹೇಗೆ ಉಂಟಾಗುತ್ತದೆ?

4) ಗೊಬ್ಬರವಾಗುವ ಕಸಗಳಿಗೆ ಎರಡು ಉದಾ ಕೊಡಿ.

# ಅಭ್ಯಾಸ ಹಾಳೆ    ಪರಿಸರ ಅಧ್ಯಯನ

ವಿದ್ಯಾರ್ಥಿಯ ಹೆಸರು;– ತರಗತಿ ;–5 ದಿನಾಂಕ;–

************************************************************************************************************************** ದಿನ–27

**ಕಲಿಕಾಫಲ;– ತ್ಯಾಜ್ಯವನ್ನು ಮರುಬಳಕೆ ಕ್ರಮಗಳ ಬಗ್ಗೆ ಯೋಜಿಸುವರು**

1. **ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1) ಹಿಂದಿನ ವರ್ಷದ ನಿನ್ನ ಪುಸ್ತಕಗಳನ್ನು ಏನು ಮಾಡುವೆ?

2) ತರಕಾರಿ ಹಾಗೂ ದಿನಸಿ ತರಲು ಮನೆಯಿಂದ ಚೀಲ ತೆಗೆದುಕೊಂಡು ಹೋಗುವುದು ಉತ್ತಮ ಏಕೆ?

3) ನಾವು ಕಸವನ್ನು ಎಲ್ಲಿ ಹಾಕಬೇಕು?

4) ಒಂದು ಸಲ ಸಾಮಾನು ತಂದ ಪ್ಲಾಸ್ಟಿಕ್ ಚೀಲವನ್ನು ಏನು ಮಾಡುವೆ?

5) ನಾವು ಹಸಿ ಕಸವನ್ನು ಏನು ಮಾಡಬೇಕು?

6) ಕಸದಿಂದಾಗುವ ಉಪಯೋಗಗಳನ್ನು ಪಟ್ಟಿ ಮಾಡಿ.

7) ನಿಮ್ಮ ಮನೆಯಲ್ಲಿ ಉತ್ಪತ್ತಿಯಾಗುವ ಕಸಗಳನ್ನು ಪಟ್ಟಿ ಮಾಡು.

# ಪರಿಸರ ಅಧ್ಯಯನ–ಅಭ್ಯಾಸ ಹಾಳೆ

ವಿಧ್ಯಾರ್ಥಿಯ ಹೆಸರು: _______ ತರಗತಿ: __ ದಿ: _________ ದಿನ:28

**ಕಲಿಕಾಂಶ: ಸ್ಥಳೀಯ ಹಾಗೂ ವಿವಿಧ ಪ್ರದೇಶಗಳಲ್ಲಿನ ಕಸುಬುಗಳನ್ನು ಗುರ್ತಿಸುವರು**

1. **ಕೆಳಗೆ ಕೊಟ್ಟಿರುವ ಚಿತ್ರಗಳಲ್ಲಿ ಅವರು ಮಾಡುತ್ತಿರುವ ಕಸುಬಿನ ಹೆಸರಿಗನುಗುಣವಾಗಿ ಅವರನ್ನು ಗುರ್ತಿಸು**










**2. ಇವರು ನಿನಗೆ ಏಕೆ ಬೇಕು ತಿಳಿಸು**

1) ಶಿಕ್ಷಕ

_________________________________________________________

2) ವೈದ್ಯ

_________________________________________________________

3) ಟೈಲರ್

_________________________________________________________

## 3. ಹೊಂದಿಸಿ ಬರೆಯಿರಿ.

| | | |
|---|---|---|
| 1) ರೈತ | ಶಾಲೆ | _________________ |
| 2) ಅಂಚೆಯವ | ಕಳ್ಳ | _________________ |
| 3) ಪೋಲಿಸ್ | ಮಣ್ಣು | _________________ |
| 4) ಶಿಕ್ಷಕ | ಹೊಲ | _________________ |
| 5) ಕುಂಬಾರ | ಕಾಗದ | _________________ |

ಜಾವೀದ್ ಭಾಷಾ ಸ.ಹಿ.ಪ್ರಾ ಕಂದಿಕೆರೆ ಹಿರಿಯೂರು ತಾ ಚಿತ್ರದುರ್ಗ ಜಿಲ್ಲೆ

ಮಾರ್ಗದರ್ಶಕರ ಸಹಿ ದಿನಾಂಕದೊಂದಿಗೆ


Edit with WPS Office

**ಕಲಿಕಾಂಶ :** ಬಾಲ ಕಾರ್ಮಿಕರು ಎದುರಿಸುವ ತೊಂದರೆಗಳನ್ನು ಅರಿತು ಅವರ ಬಗ್ಗೆ ಕಾಳಜಿಯ ವ್ಯಕ್ತಪಡಿಸುತ್ತ ನಾವು ಬಾಲ ಕಾರ್ಮಿಕರಾಗಬಾರದು ಎಂದು ತೀರ್ಮಾನಿಸುವರು.

1.ನೀನು ಈಗ ಬಾಲ್ಯವನ್ನು ಗೆಳೆಯರೊಂದಿಗೆ ಹೇಗೆ ಕಳೆಯುತ್ತಿರುವೆ ಎಂದು ಬರೆ. ದಿನ - 29

2.ಈ ಕೆಳಗಿನ ಚಿತ್ರವನ್ನು ನೋಡು ಅದನ್ನು ನೋಡಿದಾಗ ನಿನಗೆ ಏನು ತಿಳಿಯುವುದು ಯೋಚಿಸು.






ಚಿಕ್ಕ ಮಕ್ಕಳನ್ನು ಶಾಲೆಗೆ ಕಳಿಸಬೇಕು ಅಲ್ಲದೆ ಅವರನ್ನು ಯಾವುದೇ ರೀತಿಯ ದುಡಿಮೆಗಾಗಿ ಕೆಲಸಗಳಿಗೆ ಕಳಿಸಬಾರದು ಅಕಸ್ಮಾತ್ ಮಕ್ಕಳನ್ನು ಶಾಲೆಗೆ ಕಳಿಸದೆ ಹೊಟೇಲ್ ಕೆಲಸಕ್ಕೆ, ಗಾರೆ ಕೆಲಸಕ್ಕೆ, ಗ್ಯಾರೇಜ್ ಕೆಲಸ, ,ಪಾತ್ರೆ ತೊಳೆಯುವ ಬೇರೆ ಮನೆಯವರ ಕೆಲಸಕ್ಕೆ ಹಣಕ್ಕಾಗಿ ಕಳಿಸುವ ಮೂಲಕ ಶಾಲೆ ಮತ್ತು ಶಿಕ್ಷಣದಿಂದ ವಂಚಿತರನ್ನಾಗಿ ಮಾಡಬಾರದು ಹಾಗೆ ದುಡಿಮೆಗಾಗಿ ಮಕ್ಕಳನ್ನು ಕಳಿಸುವುದನ್ನು ಬಾಲಕಾರ್ಮಿಕ ಪದ್ಧತಿ ಎನ್ನುವರು .ಮಕ್ಕಳನ್ನು ದುಡಿಮೆಗೆ ಕಳಿಸುವುದು ಕರೆದುಕೊಳ್ಳುವುದು ಎರಡು ಘೋರ ಅಪರಾಧಗಳು ಈ ತಪ್ಪಿಗೆ ಕಾನೂನಿನಲ್ಲಿ ಘೋರ ಶಿಕ್ಷೆ ಆಗುವುದು ಮಕ್ಕಳು ಬಾಲ್ಯವನ್ನು ಸಂತಸದಿಂದ ಕಳೆಯಬೇಕು.




**ಮಕ್ಕಳ ಸಹಾಯವಾಣಿ :1908**

Edit with WPS Office

★ ಮಕ್ಕಳಿಗಾಗಿರುವ ಪ್ರಮುಖ ನಾಲ್ಕು ಹಕ್ಕುಗಳ ಗುಂಪುಗಳು

1. ಬದುಕುವ ಹಕ್ಕು
2. ರಕ್ಷಣೆಯ ಹಕ್ಕು
3. ವಿಕಾಸ ಹೊಂದುವ ಹಕ್ಕು
4. ಭಾಗವಹಿಸುವ ಹಕ್ಕು

ಘೋಷಣೆಗಳನ್ನು ತಿಳಿದುಕೊ ಮತ್ತು ಹಾಳೆಯಲ್ಲಿ ಬರೆದು ಗೋಡೆಗೆ ಅಂಟಿಸು

★ನಿಮ್ಮ ಮಗುವಿಗೆ ಪೆನ್ಸಿಲ್ ನೀಡಿ ಪಾತ್ರೆಅಲ್ಲ.

★ಬಾಲ್ಯವು ಕಲಿಕೆಗಾಗಿ ಹೊರತು ಗಳಿಕೆಗಾಗಿ ಅಲ್ಲ

★ಉತ್ತಮ ರಾಷ್ಟ್ರಕ್ಕಾಗಿ ಮಕ್ಕಳ ಶೋಷಣೆಯನ್ನು ನಿಲ್ಲಿಸಿ

3.ಮಕ್ಕಳು ಬಾಲ ಕಾರ್ಮಿಕ ಪದ್ಧತಿಯಿಂದ ತಮ್ಮ ಬಾಲ್ಯವನ್ನು ಹೇಗೆ ಕಳೆದುಕೊಳ್ಳುತ್ತಿದ್ದಾರೆ ಎಂಬುದನ್ನು ಯೋಚಿಸಿ ಬರೆ.

ರುಕ್ಮಿಣಿ N

ಸ.ಕಿ.ಪ್ರಾ.ಶಾಲೆ ಭೀಮನಗರ ಇಜೇರಿ

ಜೇವರ್ಗಿ ತಾ

Edit with WPS Office

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆ. ದಿನ -30

1 ಪ್ರಾಣಿಗಳಿಂದ ನಮಗಾಗುವ 5 ಅನುಕೂಲಗಳನ್ನು ಬರೆಯಿರಿ.

2, ಮನೆಯಲ್ಲಿ ಬಳಸುವ ಹಾಲು ಯಾವ ಪ್ರಾಣಿಗಳಿಂದ ದೊರೆಯುತ್ತದೆ?

3, ಕಾಡಿನಲ್ಲಿ ವಾಸಿಸುವ 5 ಪ್ರಾಣಿಗಳ ಹೆಸರುಗಳನ್ನು ಬರೆಯಿರಿ?

4. ಕಾಡುಗಳಲ್ಲಿ ಕಂಡು ಬರುವ ಐದು ಮರಗಳ ಹೆಸರುಗಳನ್ನು ಬರೆಯಿರಿ.

5.ಬೇರಾಗಿ ಬಳಸುವ ಆಹಾರ ಪದಾರ್ಥಗಳು ಯಾವುವು?

6.ಸಸ್ಯದ ಅಂದವಾದ ಚಿತ್ರ ಬರೆದು ಅದರ ಭಾಗಗಳನ್ನು ಗುರುತಿಸಿರಿ

7.ನೀರಿನ ಮೂಲಗಳು ಯಾವುವು?

8. ನೀರನ್ನು ಯಾವ ಯಾವ ಕಾರ್ಯಗಳಿಗೆ ಬಳಸುತ್ತೇವೆ?

9.ಜಲ ಮಾಲಿನ್ಯ ಹೇಗೆ ಉಂಟಾಗುತ್ತದೆ ತಿಳಿಸಿರಿ.

Edit with WPS Office

10. ನೀರಿನಿಂದ ಹರಡುವ ರೋಗಗಳು ಯಾವುವು?

11, ಎ, ಜೀವಸತ್ವ ಕೊರತೆಯಿಂದ ಬರುವ ರೋಗ ಯಾವುದು?

12.ನಾವು  ಎಂತಹ ಆಹಾರ ಸೇವಿಸಬೇಕು?

13, ಸಂಕೇತ ದೀಪದಲ್ಲಿ ಯಾವ ಯಾವ ಬಣ್ಣದ ದೀಪಗಳು ಇರುತ್ತವೆ?

14, ಸಂಕೇತ ದೀಪ ಗಳಿಂದಾಗುವ ಒಂದು ಅನುಕೂಲವನ್ನು ಬರೆಯಿರಿ?

15.ಭೂಸಾರಿಗೆ ವಾಹನಗಳನ್ನು ಬರೆಯಿರಿ?

16, ಸಂಪರ್ಕ ಮಾಧ್ಯಮಗಳು ಯಾವುವು?

17.ನಿಮ್ಮ ಮನೆಯ ಸದಸ್ಯರುಗಳ ಹೆಸರುಗಳನ್ನು ಬರೆಯಿರಿ?

18, ನಿಮ್ಮ ಅಪ್ಪನ ಅಪ್ಪ ನಿನಗೇನಾಗಬೇಕು ತಿಳಿಸಿರಿ?

ರೇಣುಕಾರಾಧ್ಯ

ಸ.ಕಿ.ಪ್ರಾ.ಶಾಲೆ

ಸಂಕ್ಲಾಪುರ

19. ನಿನಗೆ ತಿಳಿದಿರುವ ಸೌಲಭ್ಯಗಳನ್ನು ಬರೆಯಿರಿ.

20.ಜ್ಞಾನೇಂದ್ರಿಯಗಳನ್ನು ಬರೆ.